ದಿನಾಂಕಃ **08.07.2026** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ ಡಿ ಕೆ ಕೆ ವಕೀಲರಿಂದಃ-

ದಾವಾ ಆಸ್ತಿಯ ಸರ್ವೆ ನಂ 83. ಸದರಿ ಸರ್ವೆ ನಂಬರಿನ ಒಟ್ಟು ವಿಸ್ತೀರ್ಣ 41 ಎಕರೆ 9 ಗುಂಟೆ. ಸದರಿ ಸರ್ವೆ ನಂಬರಿನಲ್ಲಿ ಒಟ್ಟು 6 ಜನ ಸ್ವಾಧೀನ ಹೊಂದಿರುತ್ತಾರೆ. ಸ್ವಾಧೀನಹೊಂದಿರುವ ವ್ಯಕ್ತಿಗಳು ಯಾರು ಎಂದರೆ ನಾನು, 1 ಮತ್ತು 2 ನೇ ಪ್ರತಿವಾದಿ, ಶಿವಣ್ಣ, ಗಂಗಮ್ಮ ಮತ್ತು ಭೈರಪ್ಪ. ನಾನು ಶಿವಣ್ಣ, ಗಂಗಮ್ಮ ಮತ್ತು ಭೈರಪ್ಪ ರವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ಶಿವಣ್ಣ, ಗಂಗಮ್ಮ ಮತ್ತು ಭೈರಪ್ಪ ಎಷ್ಟೆಷ್ಟು ವಿಸ್ತೀರ್ಣ ಸ್ವಾಧೀನ ಹೊಂದಿರುತ್ತಾರೆ ಎಂದರೆ ಸಾಕ್ಷಿ ಭೈರಪ್ಪ ರವರು ಪಹಣಿಗಿಂತ 1 ಎಕರೆ ಹೆಚ್ಚಾಗಿ, ಗಂಗಮ್ಮ ರವರು ಪಹಣಿಗಿಂತ 5 ಗುಂಟೆ ಹೆಚ್ಚಾಗಿ, ಶಿವಣ್ಣ ರವರು ಪಹಣಿಗಿಂತ 23 ಗುಂಟೆಗಿಂತ ಹೆಚ್ಚಾಗಿ, 2 ನೇ ಪ್ರತಿವಾದಿ ಪಹಣಿಗಿಂತ 21 ಗುಂಟೆ ಹೆಚ್ಚಾಗಿ ಸ್ವಾಧೀನ ಹೊಂದಿರುತ್ತಾರೆ. ಪ್ರತಾಪ್ ರವರು 3 ಗುಂಟೆ ಹೆಚ್ಚಾಗಿ ಸ್ವಾಧೀನ ಹೊಂದಿರುತ್ತಾರೆ ಎಂದರೆ ಸರಿ. 1 ನೇ ಪ್ರತಿವಾದಿಯ ಆಸ್ತಿ 5 ಎಕರೆ ಎಂದರೆ ಸರಿ. ಅವರ ಅನುಭವದಲ್ಲಿ 4 ಎಕರೆ 35 ಗುಂಟೆ ಇದ್ದು 5 ಗುಂಟೆ ಕಡಿಮೆ ಇರುತ್ತದೆ ಎಂದರೆ ಸರಿ. ಆರ್ ಟಿ ಸಿ ಗಿಂತ ಹೆಚ್ಚಿನ ಅನುಭವ ಇದ್ದಲ್ಲಿ ಅವರು ಇನ್ನೊಬ್ಬರ ಜಮೀನನ್ನು ಒತ್ತುವರಿ ಮಾಡಿರುತ್ತಾರೆ ಎಂದು ಹೇಳಬಹುದೇ ಹೊರತು ಆರ್ ಟಿ ಸಿ ಗಿಂತ ಕಡಿಮೆ ಇದ್ದರೆ ಒತ್ತುವರಿ ಮಾಡಿರುತ್ತಾರೆ ಎಂದು ಹೇಳಲು ಬರುವುದಿಲ್ಲ ಎಂದರೆ ಸಾಕ್ಷಿ ನನ್ನ ಜಮೀನಿನ ಉತ್ತರ ಭಾಗದಲ್ಲಿ ಒತ್ತುವರಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

ಜಮೀನಿನ ಎಲ್ಲಾ ಹಿಡುವಳಿದಾರರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಲು ನನಗೆ ತೊಂದರೆ ಇಲ್ಲಾ ಎಂದರೆ ಸರಿ. ಜಮೀನಿನ ಎಲ್ಲಾ ಹಿಡುವಳಿದಾರರನ್ನು ಪಕ್ಷಗಾರರನ್ನಾಗಿ ಮಾಡಿದರೆ ನನ್ನ ಜಮೀನನ್ನು ಒತ್ತುವರಿ ಮಾಡಿರುವವರನ್ನು ಪತ್ತೆ ಮಾಡಬಹುದು ಎಂದರೆ ಸಾಕ್ಷಿ ಸರ್ವೆಯರ್ ನಕಾಶೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸರ್ವೆ ನಕಾಶೆಯಲ್ಲಿ 1 ನೇ ಪ್ರತಿವಾದಿ ಪಹಣಿಗಿಂತ 5 ಗುಂಟೆ ಕಡಿಮೆ ವಿಸ್ತೀರ್ಣದಲ್ಲಿ ಸ್ವಾಧೀನ ಹೊಂದಿರುತ್ತಾರೆ ಎಂದು ನಮೂದು ಇದೆ ಎಂದರೆ ಸರಿ. ಸಾಕ್ಷಿ ಮುಂದುವರೆದು 1 ಮತ್ತು 2 ನೇ ಪ್ರತಿವಾದಿಗಳು ನನ್ನ ಜಮೀನನ್ನು ಒತ್ತುವರಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸರ್ವೆಯರ್ ಪ್ರತಿವಾದಿಗಳು ನನ್ನ ಜಮೀನನ್ನು ಒತ್ತುವರಿ ಮಾಡಿರುತ್ತಾರೆ ಎಂದು ವರದಿ ನೀಡಿರುವುದಿಲ್ಲ ಹೊರತು 1 ನೇ ಪ್ರತಿವಾದಿಗೆ 5 ಗುಂಟೆ ಕಡಿಮೆ ಇದೆ ಎಂದು ವರದಿ ನೀಡಿರುತ್ತಾರೆ ಎಂದರೆ ಸಾಕ್ಷಿ ಅವರು ನನ್ನ ಜಮೀನನ್ನು ಒತ್ತುವರಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸರ್ವೆ ನಂಬರಿನ ಎಲ್ಲಾ ಹಿಡುವಳಿದಾರರನ್ನು ಪಕ್ಷಗಾರರನ್ನಾಗಿ ಮಾಡದೇ ಪ್ರತಿವಾದಿಗಳ ಆಸ್ತಿಯನ್ನು ಕಬಳಿಸುವ ಸಲುವಾಗಿ ಸುಳ್ಳು ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ. ಸುರೇಶ, ಭೈರಪ್ಪ, ಪ್ರಭು, ಗಂಗಮ್ಮ ರವರು ಒತ್ತುವರಿ ಮಾಡಿರುವ ವಿಚಾರ ತಿಳಿದಿದ್ದರೂ ಅವರನ್ನು ಉದ್ದೇಶ ಪೂರ್ವಕವಾಗಿ ಪಕ್ಷಗಾರರನ್ನಾಗಿ ಮಾಡದೇ ಈ

ಸುಳ್ಳು ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ಕೋರಿರುವಂತೆ ಪರಿಹಾರ ಪಡೆಯಲು ನಾನು ಅರ್ಹನಲ್ಲ ಎಂದರೆ ಸರಿಯಲ್ಲ. ಎಲ್ಲಾ ವಿಚಾರ ಗೊತ್ತಿದ್ದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ

Sd/-
**2** ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.